ದಾವಣಗೆರೆಯಲ್ಲಿ ಔದ್ಯೋಗಿಕ ಸಂಪದವನ್ನು ಸ್ಥಾಪಿಸುವ ಬಗ್ಗೆ.

ಪ್ರಶ್ನೆ ಸಂಖ್ಯೆ ೪೬. ಶ್ರೀ ಪಂಪಾಪತಿ (ದಾವಣಗೆರೆ)

ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಔದ್ಯೋಗಿಕ ಸಂಪದವನ್ನು ಸ್ಥಾಪಿಸಲು ಸರ್ಕಾರದ ಯೋಜನೆ ಇದೆಯೆ?

ಆ) ಔದ್ಯೋಗಿಕ ಸ್ಥಾಪನೆಯ ಬಗ್ಗೆ ಇದುವರೆಗೆ ನಡೆದ ಪ್ರಗತಿಯು ಈಗ ಯಾವ ಹಂತದಲ್ಲಿದೆ.

ಇ) ಸಣ್ಣ ಕೈಗಾರಿಕೆ ಘಟಕಗಳ ಸ್ಥಾಪನೆ ಬಗ್ಗೆ ದಾವಣಗೆರೆ ಉದ್ದಿಮೆಗಾರರಿಂದ ಬೇಡಿಕೆ ಗಳೇನಾದರೂ ಬಂದಿದೆಯೆ?

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ದಾವಣಗೆರೆಯಲ್ಲಿ ಎರಡು ಔದ್ಯೋಗಿಕ ಸಂಪದಗಳನ್ನು (ಇಂಡಸ್ಟ್ರಿಯಲ್ ಎಸ್ಟೇಟ್) ಸ್ಥಾಪಿಸ ಲಾಗಿದೆ. ಒಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವಂದಲೂ ಮತ್ತೊಂದ ಕರ್ನಾಟಕ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಮಂಡಳಿಯಿಂದಲು ಸ್ಥಾಪಿಸಲಾಗಿದೆ.

ಆ) ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಸ್ಥಾಪಿಸಿರುವ ಔದ್ಯೋಗಿಕ ಸಂಪದದಲ್ಲಿ ೨೦ ಶೆಡ್ಡುಗಳ ನಿರ್ಮಾಣವಾಗಿದೆ. ಇನ್ನು ೮ ಶೆಡ್ಡುಗಳ ನಿರ್ಮಾಣ ಕಾರ್ಯ ನಡೆದಿದೆ. ೨ಳ ನಿವೇಶನಗಳನ್ನು ಕೂಡ ತಯಾರು ಮಾಡಲಾಗಿದೆ. ಕರ್ನಾಟಕ ೃಗಾರಿಕಾ ಕ್ಷೇತ್ರಗಳ ಅಭಿವೃದ್ಧಿ ಮಂಡಳಿ ವತಿಯಿಂದ ಆಗಿರುವ ಸಂಪದದಲ್ಲಿ ೩೨ ನಿವೇಶನಗಳನ್ನು ಸಜ್ಜು ಮಾಡಲಾಗಿದೆ.

ಇ) ಇರುವ ಬೇಡಿಕೆಯನ್ನು ಹೆಚ್ಚು ಮಟ್ಟಿಗೆ ಪೂರೈಸಲಾಗಿದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೇಳಿದಹಾಗೆ ದಾವಣಗೆರೆಯಲ್ಲಿ ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ೨೦ ಶೆಡ್‌ಗಳು ನಿರ್ಮಾಣವಾಗಿವೆ. ಇನ್ನೂ ೮ ನಿರ್ಮಾಣ ಕಾರ್ಯದಲ್ಲಿವೆ. ೨ಳ ನಿವೇಶನಗಳನ್ನು ಕೂಡಾ ತಯಾರು ಮಾಡಲಾಗಿದೆ ಎಂದು ಹೇಳಿ ದ್ದಾರೆ. ಈಗ ನಿರ್ಮಾಣ ಆಗಿರುವ ೨೦ ಶೆಡ್‌ಗಳಲ್ಲಿ ಕೆಲಸ ಪ್ರಾರಂಭ ಆಗಿದೆಯೇ? ಹಾಗೂ ಅವಕ್ಕೆ ಬೇಕಾದ ವಿದ್ಯುಚ್ಛಕ್ತಿ ಮತ್ತು ನೀರಿನ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆಯೇ? ಮಿಕ್ಕ ೮ ಶೆಡ್ಡುಗಳ ನಿರ್ಮಾಣ ಯಾವಾಗ ಪೂರ್ಣಗೊಳ್ಳುತ್ತದೆ? ಹಾಗೂ ೨ಳ ನಿವೇಶನಗಳನ್ನು ಹಂಚಲಾಗಿದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—೨೦ ಶೆಡ್ಡುಗಳನ್ನು ಹಂಚಲಾಗಿದ್ದು ಅವುಗಳಲ್ಲಿ ಕೆಲವು ಉದ್ಯಮಗಳನ್ನು ಪ್ರಾರಂಭ ಮಾಡಿಲ್ಲ. ಆದುದರಿಂದ ಅವನ್ನು ರದ್ದು ಮಾಡಿ ಬೇರೆಯವರಿಗೆ ಹಂಚಿಕೆ ಮಾಡುವ ವ್ಯವಸ್ಥೆಯನ್ನು ಕೂಡಲೇ ಮಾಡಲಾಗಿದೆ. ಮತ್ತು ಮುಂದೆ ಏನು ನಿರ್ಮಾಣವಾಗುತ್ತವ ಅವನ್ನೂ ಹಂಚುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಪಂಪಾಪತಿ.—೨ಳ ನಿವೇಶನಗಳನ್ನು ಹಂಚಿದ್ದೀರೋ ಅಥವಾ ಮಾಡಿದ್ದೀರೋ?

ಶ್ರೀ ಎಸ್.ಆರ್. ಬೊಮ್ಮಾಯಿ.—ಹಂಚಿಕೆಯಾಗತಕ್ಕದ್ದು ಉಳಿದಿವೆ. ಹಂಚುವುದಕ್ಕೆ ಕಾರ್ಯ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಹಂಚಿರುವ ಶೆಡ್‌ಗಳಲ್ಲಿ ಎಷ್ಟು ಜನ ಅದರ ಉಪಯೋಗ ಮಾಡಿ ಕೊಂಡಿಲ್ಲ?

ಶ್ರೀ ಎಸ್.ಆರ್. ಬೊಮ್ಮಾಯಿ.—೧೩ ಶೆಡ್‌ಗಳನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಅದರಲ್ಲಿ ಇಬ್ಬರು ಉಮೇದುವಾರರು ಮಾತ್ರ ಕಾರ್ಯ ಪ್ರಾರಂಭ ಮಾಡಿದ್ದಾರೆ. ಉಳಿದವರು ಕಾರ್ಯ ಪ್ರಾರಂಭ ಮಾಡಿಲ್ಲ.

ಶ್ರೀ ಪಂಪಾಪತಿ.—ನನಗೆ ತಿಳಿದ ಮಟ್ಟಿಗೆ ಇವರಿಗೆ ವಿದ್ಯುತ್ ಹಾಗೂ ನೀರಿನ ಸೌಲಭ್ಯವನ್ನು ಒದಗಿಸಿಲ್ಲ. ಆದ್ದರಿಂದ ಯಾರೂ ಕೆಲಸ ಪ್ರಾರಂಭ ಮಾಡಿಲ್ಲ. ಹಾಗೂ ಇವತ್ತು ದಾವಣಗೆರೆ ನಗರದ ಪಂಧ್ಯ ಭಾಗದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆದು ನಾಗರೀಕರಿಗೆ ಅನೇಕ ತೊಂದರೆಗಳಾಗುತ್ತಿವೆ.

ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಕೊಟ್ಟು ಶೀಘ್ರಗತಿಯಲ್ಲಿ ಅವರಿಗೆ ಬೇಕಾದ ನೀರು, ವಿದ್ಯುತ್ ಒದಗಿಸಿದಲ್ಲಿ ಊರ ಒಳಗೆ ಇರುವ ಕೈಗಾರಿಕೆಗಳು ಅಲ್ಲಿಗೆ ಹೋಗಲು ಸಹಾಯಕವಾಗುತ್ತದೆ. ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೭೯-೮೦ ರಲ್ಲಿ ೧೯ ಎಕರೆ ಜಮೀನನ್ನು ಸರ್ಕಾರ ಕೊಂಡು ಕೊಂಡಿತು. ಇದು ಊರಿನಿಂದ ಸುಮಾರು ೪-೫ ಮೈಲಿ ದೂರದಲ್ಲಿತ್ತು. ಈಗ ದಾವಣಗೆರೆ ನಗರ ಬೆಳೆದಿರುವುದರಿಂದ ಆ ಜಾಗ ನಗರಕ್ಕೆ ಬಹಳ ಹತ್ತಿರವಿರುವಂತೆ ಕಾಣುತ್ತಿದೆ ನೀರನ್ನು ಒದಗಿಸುವುದಕ್ಕೆ ಈಗಾಗಲೇ ನಮ್ಮ ಇಲಾಖೆಯವರು ೭ ಲಕ್ಷ ರೂಪಾಯಿಗಳನ್ನು ತುಂಬಿದ್ದಾರೆ. ದಾವಣಗೆರೆ ನಗರದಿಂದ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಪಂಪಾಪತಿ.—ಎಷ್ಟು ದಿನಗಳಲ್ಲಿ ನೀರನ್ನು ಒದಗಿಸುತ್ತೀರಿ?

ಶ್ರೀ ಎಸ್ ಆರ್. ಬೊಮ್ಮಾಯಿ.—ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್‌ನವರಿಗೆ ಹಣ ಕೊಡಲಾಗಿದೆ. ಅವರು ಆದಷ್ಟು ಬೇಗ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಕೊಟ್ಟ ೧೩ ಶೆಡ್‌ಗಳಲ್ಲಿ ಕೇವಲ ಇಬ್ಬರು ಪ್ರಾರಂಭ ಮಾಡಿದ್ದಾರೆಂದು ಹೇಳಿದಿರಿ. ನೀವು ಅವರಿಗೆ ನೀರು ಕೊಡದಿದ್ದುದರಿಂದ ಬೇರೆಯವರು ಪ್ರಾರಂಭ ಮಾಡದೇ ಇರಬಹುದು. ಅಥವಾ ಅವರ ಹಣ ಹೂಡಿಕೆ ಇಲ್ಲದಿದ್ದುದರಿಂದಲಾದರೂ ಅವರು ಪ್ರಾರಂಭ ಮಾಡದೇ ಇರಬಹುದು. ಇದರಲ್ಲಿ ಮೊದಲನೆಯದು ನಿಜವಾದರೆ ನಿಮ್ಮದು ತಪ್ಪಾಗುತ್ತದೆ. ಎರಡನೆಯದು ನಿಜವಾದರೆ ಅವರದು ತಪ್ಪಾಗುತ್ತದೆ. ಇದಕ್ಕೆ ಕಾರಣ ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—ಎರಡೂ ಇದೆ ಸ್ವಾಮಿ. ಸರ್ಕಾರ ಒದಗಿಸಬೇಕಾದ ನೀರು ಮತ್ತು ವಿದ್ಯುತ್ತನ್ನು ಒದಗಿಸದೇ ಇರುವುದೂ ಇದೆ ಮತ್ತೆ ಕೆಲವರು ತಾವೇ ಕೆಲಸ ಪ್ರಾರಂಭ ಮಾಡದೇ ಬಿಟ್ಟುಕೊಂಡಿದ್ದಾರೆ. ಈ ಶೆಡ್‌ಗಳನ್ನು ಪ್ರಾರಂಭ ಮಾಡುವಾಗಲೇ ನೀರು ಮತ್ತು ವಿದ್ಯುತ್ ಕೊಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಆದರೆ ಇವನ್ನು ಈ ಮುಂಚೆಯೇ ತೆಗೆದೇ ಕೊಂಡಂತಹವುಗಳಾಗಿವೆ. ಆದ್ದರಿಂದ ಇವಕ್ಕೆ ನೀರು ಮತ್ತು ವಿದ್ಯುತ್ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಂಪಾಪತಿ.—ಈ ೨೦ ಶೆಡ್‌ಗಳನ್ನು ನಿರ್ಮಾಣ ಮಾಡಿ ಎಷ್ಟು ವರ್ಷಗಳಾದವು?

ಶ್ರೀ ಎಸ್.ಆರ್. ಬೊಮ್ಮಾಯಿ.—ನಿರ್ಮಾಣವಾಗಿ ೪ ವರ್ಷಗಳಾದವು.

ಶ್ರೀ ಪಂಪಾಪತಿ.—೪ ವರ್ಷದಿಂದ ಅಲ್ಲಿ ಸರ್ಕಾರ ಹಣ ಹೂಡಿ ಅವು ಹಾಗೇ ಇವೆ. ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರ ಇಲ್ಲಿ ಕೆಲಸ ಪ್ರಾರಂಭ ಆಗುವ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಳೆದ ೪ ವರ್ಷದಿಂದ ನೀರು ಮತ್ತು ವಿದ್ಯುತ್ ಕೊಡುವ ಪ್ರಯತ್ನ ಮಾಡಲಾಗಿದೆ ಆದರೆ ಆಗಿಲ್ಲ. ಆದಷ್ಟು ಬೇಗ ಇವನ್ನು ಒದಗಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ಉಪಾಧ್ಯಕ್ಷರು.—ಇಷ್ಟಿಗೆ ಪ್ರಶ್ನೋತ್ತರದ ವೇಳೆ ಮುಗಿಯಿತು.

ವಿಷಯ.—ಕೃಷ್ಣ ಮೇಲ್ದಂಡ್ ಯೋಜನೆ.

ಪ್ರಶ್ನೆ ೩೭ ಶ್ರೀ ಬಾಪ್ಪಗೌಡ ದರ್ಶನಪುರ (ಶಹಪುರ) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೃಷ್ಣ ಮೇಲ್ದಂಡ್ ಯೋಜನೆಯ ಮೊದಲನೆಯ ಮತ್ತು ಎರಡನೆಯ ಹಂತದ ಒಟ್ಟು ವೆಚ್ಚ.

ಆ) ಕೃಷ್ಣ ಮೇಲ್ದಂಡ್ ಯೋಜನೆ ಮೊದಲನೆ ಹಂತದ ಮೊದಲನೆ ಮಜಲಿನ ಕೆಲಸ ಕಾರ್ಯಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಸರ್ಕಾರವು ಕೈಗೊಂಡಿರುವುದು ನಿಜವೇ.